2016 ಕ.ತೀ.ವ 536

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀಕಾಂತ್ –ವಿರುದ್ಧ– ಸುಭಾಸ್ ಇವರು ಮೃತಪಟ್ಟಿರುವುದರಿಂದ ಇವರ ಕಾನೂನು ಪ್ರತಿನಿಧಿಗಳಾದ ಮೈನಾವತಿ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 18ನೇ ಕ್ರಮಾದೇಶದ XVIIIನೇ ನಿಯಮದಡಿಯಲ್ಲಿ ನ್ಯಾಯಾಲಯ ಸ್ಥಳೀಯ ಪರಿಶೀಲನೆ ನಡೆಸುವ ಅಧಿಕಾರ – ವಿವಾದಿತ ಸ್ವತ್ತುಗಳ ಬಗ್ಗೆ ಸ್ಥಳೀಯ ಪರಿಶೀಲನೆಯನ್ನು ನಡೆಸುವಂತೆ ಕೋರಿ ಅಪೀಲು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಕೆ. ಅರ್ಜಿಯ ವಜಾ – ಇದನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

'ಸಿಪಿಸಿ' ಯ 18ನೇ ನಿಯಮದ XVIIIನೇ ಆದೇಶದಲ್ಲಿ "ದಾವೆಯ ಯಾವುದೇ ಹಂತದಲ್ಲಿ" ಎಂಬ ಪದಗಳ ಬಳಕೆಯು, ಸ್ಥಳೀಯ ಪರಿಶೀಲನೆಯನ್ನು ಯಾವುದೇ ಹಂತದಲ್ಲಿ, ಅಂದರೆ, ಸಾಕ್ಷ್ಯವನ್ನು ದಾಖಲಿಸುವ ಮೊದಲು ಅಥವಾ ಸಾಕ್ಷ್ಯವು ನಿರ್ಣಾಯಕವಾದ ನಂತರ ಮತ್ತು ವಾದಗಳನ್ನು ಆಲಿಸುವ ಮೊದಲು ಅಥವಾ ತೀರ್ಪನ್ನು ನೀಡಿದ ನಂತರ ಮಾಡಬಹುದು. ಅಂಥ ಪರಿಶೀಲನೆಗಳನ್ನು ಮಾಡುವುದರಲ್ಲಿ ಯಾವುದಾದರೂ ಉದ್ದೇಶವಿರಬೇಕೆಂಬುದು ಸ್ಪಷ್ಟವಾಗಿದೆ. ಆದರೆ, ಯಾವುದೇ ಕಲ್ಪನೆಯ ವ್ಯಾಪ್ತಿಯಲ್ಲಿ, ಸಾಕ್ಷಿದಾರರ ಹೇಳಿಕೆಯು ಇತರರಿಗೆ ವಿರುದ್ಧವಾಗಿದೆಯೆಂದು ವಿವೇಚಿಸಲು ಅಥವಾ ನಂಬಲು ಉಪಬಂಧಗಳು ಅಧಿನಿಯಮಿತವಾಗಿವೆಯೆಂದು ಹೇಳಲಾಗುವುದಿಲ್ಲ.

ಈ ಮೊಕದ್ದಮೆಯಲ್ಲಿ ಒಳಗೊಂಡಿರುವ ವಿವಾದ/ವಿವಾದಾಂಶವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅಪೀಲು ನ್ಯಾಯಾಲಯಕ್ಕೆ ಅಂಥ ಯಾವುದೇ ಸಂದಿಗ್ಧತೆ ಅಥವಾ

*ರಿಟ್ ಅರ್ಜಿ ಸಂಖ್ಯೆ: 107205/2015 (ಜಿಎಂ–ಸಿಪಿಸಿ), ದಿನಾಂಕ: 28ನೇ ಜುಲೈ, 2015.

**ತೊಂದರೆ ಕಂಡುಬಂದಿಲ್ಲ. ಅಷ್ಟೇ ಅಲ್ಲದೆ, ಪಿಡಬ್ಲ್ಯೂ.1 ಗೆ ಅವನ ಸಾಕ್ಷ್ಯದಲ್ಲಿ ಕೆಲವು ಸೇರ್ಪಡೆಗಳು ಸಹ ಇದ್ದು, ಅದು ಖಂಡಿತವಾಗಿ ಅನುಸೂಚಿತ ಸ್ವತ್ತುಗಳಿಗೆ ಅಪೀಲು ನ್ಯಾಯಾಲಯದಿಂದ ಖುದ್ದು ಅಥವಾ ಸ್ಥಳೀಯ ಪರಿಶೀಲನೆ ಅಗತ್ಯವಿದೆಯೆಂದು ಹೇಳುವುದಿಲ್ಲ.**

**ಈ ಕಾರಣದಿಂದಾಗಿ ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.**

ಅಪೀಲುದಾರರ ಪರ : ಶ್ರೀ ಎನ್.ಪಿ. ವಿವೇಕ್‌ಮೆಹ್ತಾ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

1. ಅರ್ಜಿದಾರನು–ವಾದಿ/ಅಪೀಲುದಾರನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (ಸಂಕ್ಷಿಪ್ತವಾಗಿ 'ಸಿಪಿಸಿ') 18ನೇ ನಿಯಮದ XVIIIನೇ ಆದೇಶದಡಿ ಸಲ್ಲಿಸಲಾಗಿದ್ದ ವಾದಕಾಲೀನ ಅರ್ಜಿ ಸಂಖ್ಯೆ 5ರ ತನ್ನ ಅರ್ಜಿಯನ್ನು ವಜಾ ಮಾಡಿದ ದಿನಾಂಕ 05.06.2015ರ ಆದೇಶದ ವಿರುದ್ಧ ಈ ಮೇಲಿನ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾನೆ.

2. ವಾದಿಯು ದಾವೆಯ ಅನುಸೂಚಿತ ಸ್ವತ್ತುಗಳ ನಿರುಪಾಧಿಕ ಮಾಲೀಕನೆಂದು ಮತ್ತು ಅವುಗಳ ಸ್ವಾಧೀನವನ್ನು ಹೊಂದಿರುತ್ತಾನೆಂದು ದಿನಾಂಕ 13.04.2005ರ ನೋಂದಾಯಿತ ಕ್ರಯಪತ್ರದ ಮೇರೆಗೆ ಉತ್ತಮ ಬೆಲೆಗೆ ಖರೀದಿಸಿದ್ದನೆಂದು ಮತ್ತು ಪ್ರತಿವಾದಿಯು ದಾವೆಯ ಅನುಸೂಚಿತ 'ಎ' ಸ್ವತ್ತಿನ ಪಕ್ಕದ ಅನುಸೂಚಿತ 'ಬಿ' ಸ್ವತ್ತಿನ ಮಾಲೀಕನಾಗಿದ್ದಾನೆಂದು ಹಾಗೂ ಕೆಲವು ಅನಿವಾರ್ಯ ಸಂದರ್ಭಗಳಿಂದಾಗಿ, ತರುವಾಯ ಪ್ರತಿವಾದಿಯು ಬಸವರಾಜ ಭೀಮಪ್ಪ ಚಲಗೇರಿ ಎಂಬುವರ ಸ್ವತ್ತಿನಲ್ಲಿ ಕೆಲವು ತಾತ್ಕಾಲಿಕ ನಿರ್ಮಾಣಗಳನ್ನು ಮಾಡಿರುತ್ತಾನೆಂದು ಹಾಗೂ ಅದು ದಾವೆಯ ಅನುಸೂಚಿತ 'ಎ' ಸ್ವತ್ತಿನ ಪಶ್ಚಿಮದ ಕಡೆಯಲ್ಲಿದೆಯೆಂದು ವಾದಿಸಿ, ವಾದಿ/ಅರ್ಜಿದಾರನು, ಅಕ್ರಮ ನಿರ್ಮಾಣವನ್ನು ತೆಗೆದುಹಾಕುವ ಮೂಲಕ, ದಾವೆಯ ಅನುಸೂಚಿತ 'ಎ' ಸ್ವತ್ತಿಗೆ ಸಂಬಂಧಿಸಿದ ಸ್ವಾಮ್ಯದ ಘೋಷಣೆಗಾಗಿ ಹಾಗೂ

ದಾವೆಯ ಅನುಸೂಚಿತ ಸ್ವತ್ತಿನ ಹಕ್ಕುದಾರನಿಲ್ಲದ ಸ್ವಾಧೀನವನ್ನು ಹಸ್ತಾಂತರಿಸಲು ಪ್ರತಿವಾದಿಯ ವಿರುದ್ಧ ಆಜ್ಞಾಪಕ ನಿರ್ಬಂಧಕಾಜ್ಞೆಯ ತತ್ಪರಿಣಾಮವಾದ ಪರಿಹಾರಕ್ಕಾಗಿ ಮೂಲ ದಾವೆ ಸಂಖ್ಯೆ 146/2009ರ ದಾವೆಯನ್ನು ಹೂಡಿರುತ್ತಾನೆ. ಪ್ರತಿವಾದಿಯು ದಾವೆಯ ಅನುಸೂಚಿತ 'ಎ' ಸ್ವತ್ತಿನ ಸಂಬಂಧದಲ್ಲಿ ಯಾವುದೇ ಹಕ್ಕು, ಸ್ವಾಮ್ಯವಿಲ್ಲದೆ, ಸ್ವೇಚ್ಛಾ ಪ್ರವೃತ್ತಿಯಿಂದ ವಾದಿಯ ಸ್ವತ್ತನ್ನು ಸುಮಾರು 10 X 15 ಅಡಿಗಳ ವ್ಯಾಪ್ತಿಯವರೆಗೆ, ಇತ್ಯಾದಿ ಒತ್ತುವರಿ ಮಾಡಿ ಖಾಯಂ ನಿರ್ಮಾಣವನ್ನು ಮಾಡಿರುತ್ತಾನೆ.

3. ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ನೀಡಿದ್ದು, ವಾದಿಯ ದೃಢೋಕ್ತಿಗಳನ್ನು ವಿರೋಧಿಸಿದ್ದಾನೆ ಮತ್ತು ದಾವೆಯನ್ನು ವಜಾಗೊಳಿಸಲು ಕೋರಿದ್ದಾನೆ.

4. ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ದಿನಾಂಕ 31.07.2008ರಂದು ದಾವೆಯನ್ನು ವಜಾಗೊಳಿಸಿತು.

5. ಸದರಿ ತೀರ್ಪು ಮತ್ತು ಡಿಕ್ರಿಯ ವಿರುದ್ಧ ರಾಣೆಬೆನ್ನೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಸಮಕ್ಷಮದಲ್ಲಿ ಅರ್ಜಿದಾರನು ಆರ್.ಎ.ಸಂಖ್ಯೆ 81/2012ರಲ್ಲಿ ನಿಯತ ಅಪೀಲನ್ನು ಸಲ್ಲಿಸಿದ್ದಾನೆ. ಮುಖ್ಯ ವಿಷಯದ ಆಧಾರದ ಮೇಲೆ ವಾದವಿವಾದಗಳಿಗಾಗಿ ಅಪೀಲನ್ನು ಸಲ್ಲಿಸಿದಾಗ, ಅರ್ಜಿದಾರ/ಅಪೀಲುದಾರನು, ಸದರಿ ದಾವೆಯಲ್ಲಿ ಎರಡೂ ಕಡೆಯ ಪಕ್ಷಕಾರರು ಒದಗಿಸಿದ ಸಾಕ್ಷ್ಯವು ಬಹಳ ಅಸ್ಪಷ್ಟವಾಗಿದ್ದು, ಅರ್ಥಮಾಡಿಕೊಳ್ಳಲು ಕಷ್ಟವಾಗಿದೆಯೆಂದು ವಾದಿಸಿ, ಅಪೀಲು ನ್ಯಾಯಾಲಯದಿಂದ ವಿವಾದಿತ ಸ್ವತ್ತುಗಳ ಸ್ಥಳೀಯ ಪರಿಶೀಲನೆಗಾಗಿ ಕೋರಿ, 'ಸಿಪಿಸಿ' ಯ 18ನೇ ನಿಯಮದ XVIIIನೇ ಕ್ರಮಾದೇಶದಡಿ ಅರ್ಜಿ ಸಲ್ಲಿಸಿದ್ದಾನೆ. ಆದುದರಿಂದ, ಅಪೀಲು ನ್ಯಾಯಾಲಯದಿಂದ ವಿವಾದಿತ ಸ್ವತ್ತಿನ ಖುದ್ದು ಪರಿಶೀಲನೆ ಅಗತ್ಯವಿದೆ.

6. ಪ್ರತಿವಾದಿ/ಪ್ರತ್ಯಪೀಲುದಾರನು ಸದರಿ ಅರ್ಜಿಗೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾನೆ ಮತ್ತು ಈಗಾಗಲೇ ಅಪೀಲುದಾರನು ಅಧಿವಿಚಾರಣಾ ನ್ಯಾಯಾಲಯದ ಸಮಕ್ಷಮದಲ್ಲಿನ ತನ್ನ ಸಾಕ್ಷ್ಯದಲ್ಲಿ, ತನ್ನ ಕ್ರಯಪತ್ರದಲ್ಲಿ ಒಳಗೊಂಡಿರುವ ಸ್ವತ್ತಿನ ಪೂರ್ವದಿಂದ ಪಶ್ಚಿಮದ ಕಡೆಗಿರುವ ಗೋಡೆಗಳು ಒಂದೇ ಗೋಡೆಯಾಗಿದೆಯೆಂದು

ಒಪ್ಪಿದ್ದಾನೆ ಮತ್ತು ಸದರಿ ಒಪ್ಪಿಗೆಯ ಆಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಸಹ, ಅಧಿವಿಚಾರಣಾ ನ್ಯಾಯಾಲಯವು ತೀರ್ಪನ್ನು ಹೊರಡಿಸಿದೆ ಹಾಗೂ ಪಕ್ಷಕಾರರು ಒದಗಿಸಿದ ಸಾಕ್ಷ್ಯದಲ್ಲಿ ಯಾವುದೇ ಅಸ್ಪಷ್ಟತೆಯಿಲ್ಲ, ನ್ಯಾಯಾಲಯವು ಖುದ್ದು ಪರಿಶೀಲನೆ ಮಾಡುವ ಅಗತ್ಯವಿಲ್ಲ ಹಾಗೂ ಈ ಕಾರಣದಿಂದ ವಾದಕಾಲೀನ ಅರ್ಜಿಯನ್ನು ತಿರಸ್ಕರಿಸಲು ಕೋರಲಾಗಿದೆ.

7. ಸದರಿ ಅರ್ಜಿಯನ್ನು ಮತ್ತು ಆಕ್ಷೇಪಣೆಗಳನ್ನು ಪರಿಗಣಿಸಿ, ಅಪೀಲು ನ್ಯಾಯಾಲಯವು ದಿನಾಂಕ 15.06.2015ರ ತನ್ನ ಆದೇಶದ ಮೂಲಕ ಸದರಿ ಅರ್ಜಿಯನ್ನು ವಜಾ ಮಾಡಿದೆ. ಸದರಿ ಆದೇಶದ ವಿರುದ್ಧ ಈಗಿನ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

8. ಅರ್ಜಿದಾರನ ಪರ ಮಾನ್ಯ ವಕೀಲರ ವಾದವನ್ನು ನಾನು ಆಲಿಸಿದ್ದೇನೆ.

9. ಅರ್ಜಿದಾರನ ಪರ ಮಾನ್ಯ ವಕೀಲರಾದ ಶ್ರೀ ಎನ್.ಪಿ. ವಿವೇಕ್ ಮೆಹ್ತಾರವರು, ಅರ್ಜಿಯನ್ನು ತಿರಸ್ಕರಿಸಿ ಅಪೀಲು ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ದೋಷಪೂರ್ಣವಾಗಿದೆ ಮತ್ತು ಕಾನೂನಿಗೆ ವಿರುದ್ಧವಾಗಿದೆ ಹಾಗೂ ಕ್ರಯಪತ್ರದ ಅನುಸಾರ ಅರ್ಜಿದಾರನ ಸ್ವತ್ತಿನ ಒಟ್ಟು ವಿಸ್ತೀರ್ಣ 561 ಚದರಡಿಯಿದ್ದು ಮನೆಯ ವಿಸ್ತೀರ್ಣ, ಅಂದರೆ, ಕಟ್ಟಲಾದ ಪ್ರದೇಶದ ವಿಸ್ತೀರ್ಣವು 200 ಚದರಡಿ (20x10 ಅಡಿ)ಯಾಗಿದೆ ಮತ್ತು ಉಳಿದ ವಿಸ್ತೀರ್ಣವು ಖಾಲಿ ಜಾಗವಾಗಿದೆ ಹಾಗೂ ಈ ಖಾಲಿ ಜಾಗವು ಉತ್ತರ ದಿಕ್ಕಿನ ಕಡೆಗಿದೆ; ಅರ್ಜಿದಾರನ ಮನೆಯ ಉತ್ತರದ ಕಡೆಗಿನ ಗೋಡೆಯಲ್ಲಿ ಒಂದು ಕಿಟಕಿಯಿದೆ. ಪೂರ್ವ ಮತ್ತು ಪಶ್ಚಿಮಕ್ಕಿರುವ ಗೋಡೆಗಳು ಒಂದೇ ಗೋಡೆಯಾಗಿದೆ ಹಾಗೂ ಇದು ದಾಖಲೆಯಲ್ಲಿರುವ ವಿಷಯ ಸಾಮಗ್ರಿಯಿಂದ ವ್ಯಕ್ತವಾಗಿದೆಯೆಂದು ವಾದಿಸಿದ್ದಾರೆ. ಈ ಮಹತ್ವದ ಸಂಗತಿಯನ್ನು ಅಪೀಲು ನ್ಯಾಯಾಲಯವು ಪರಿಗಣಿಸಿರುವುದಿಲ್ಲ ಮತ್ತು ಪಕ್ಷಕಾರರ ನಡುವಿನ ವಿವಾದವನ್ನು ಬಗೆಹರಿಸಲು ನ್ಯಾಯಾಲಯವು ಸ್ಥಳ ಪರಿಶೀಲನೆ ನಡೆಸುವ ಅಗತ್ಯವಿದೆ. ಆದ್ದರಿಂದ, ಅವನು ಅಪೀಲು ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವನ್ನು ಬದಿಗಿರಿಸಲು ಕೋರಿದ್ದಾನೆ.

10. ಅರ್ಜಿದಾರನ ಪರ ಹಾಜರಾದ ಮಾನ್ಯ ವಕೀಲರು ಮಂಡಿಸಿದ ವಾದಗಳನ್ನು ನಾನು ಎಚ್ಚರಿಕೆಯಿಂದ ಪರ್ಯಾಲೋಚಿಸಿದ್ದೇನೆ ಮತ್ತು ದಾಖಲೆಯಲ್ಲಿರುವ ಸಂಪೂರ್ಣ ವಿಷಯ ಸಾಮಗ್ರಿಯನ್ನು ಅವಲೋಕಿಸಿದ್ದೇನೆ.

11. ದಾವೆಯ ಅನುಸೂಚಿತ ಸ್ವತ್ತುಗಳಾದ 'ಎ' ಮತ್ತು 'ಬಿ' ಸ್ವತ್ತುಗಳಿಗೆ ಸಂಬಂಧಿಸಿದಂತೆ ಸ್ವಾಮ್ಯದ ಘೋಷಣೆಗಾಗಿ ಮತ್ತು ಪ್ರತಿವಾದಿಯು ಕಟ್ಟಿಸಿರುವನೆಂದು ಆಪಾದಿಸಿರುವ ಅಕ್ರಮ ನಿರ್ಮಾಣವನ್ನು ಕೆಡವಿಹಾಕಲು ಆಜ್ಞಾಪಕ ನಿರ್ಬಂಧಕಾಜ್ಞೆಯ ತತ್ಪರಿಣಾಮವಾದ ಪರಿಹಾರಕ್ಕಾಗಿ ವಾದಿಯು ಈ ದಾವೆಯನ್ನು ಹೂಡಿದ್ದಾನೆಂಬುದರಲ್ಲಿ ಯಾವುದೇ ವಿವಾದವಿಲ್ಲ. ದಾಖಲೆಯಲ್ಲಿರುವ ಸಂಪೂರ್ಣ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಪರಿಶೀಲಿಸಿದ ನಂತರ ಅರ್ಜಿದಾರನು ದಾವೆಯ ಅನುಸೂಚಿತ 'ಎ' ಮತ್ತು 'ಬಿ' ಸ್ವತ್ತುಗಳಿಗೆ ಸಂಬಂಧಿಸಿದಂತೆ ಸ್ವಾಮ್ಯವನ್ನು ಸಾಬೀತು ಮಾಡುವಲ್ಲಿ ವಿಫಲನಾಗಿದ್ದಾನೆ ಮತ್ತು ಪ್ರತಿವಾದಿಯು ಮಾಡಿರುವ, ಆಪಾದಿಸಲಾದ ಒತ್ತುವರಿಯನ್ನು ಸಾಬೀತು ಮಾಡುವಲ್ಲಿ ವಾದಿಯು ವಿಫಲನಾಗಿದ್ದಾನೆಂದು ತೀರ್ಮಾನಿಸಿ, ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ವಜಾ ಮಾಡಿದೆ.

12. ಸದರಿ ತೀರ್ಪು ಮತ್ತು ಡಿಕ್ರಿಯ ವಿರುದ್ಧ ನಿಯತ ಅಪೀಲನ್ನು ಸಲ್ಲಿಸಲಾಗಿದೆ. ಅಪೀಲನ್ನು ವಾದ ವಿವಾದಗಳಿಗೆ ಒಳಪಡಿಸಿದಾಗ, ಆ ವಿಳಂಬವಾದ ಹಂತದಲ್ಲಿ, ಅಪೀಲುದಾರನು ಈಗಿನ ಅರ್ಜಿಯನ್ನು ಸಲ್ಲಿಸಿದ್ದಾನೆ.

13. ಸಿವಿಲ್ ಪ್ರಕ್ರಿಯಾ ಸಂಹಿತೆಯ 18ನೇ ನಿಯಮದ XVIIIನೇ ಕ್ರಮಾದೇಶದ ಉಪಬಂಧವನ್ನು ಉದ್ಧೃತಗೊಳಿಸುವುದು ಯುಕ್ತವಾಗಿದ್ದು ಅದನ್ನು ಈ ಮುಂದಿನಂತೆ ಓದಲಾಗುತ್ತದೆ.

> "18. **ನ್ಯಾಯಾಲಯದ ಪರಿಶೀಲನಾಧಿಕಾರ.**– ನ್ಯಾಯಾಲಯವು ದಾವೆಯ ಯಾವುದೇ ಹಂತದಲ್ಲಿ, ಯಾವುದೇ ಪ್ರಶ್ನೆ ಉದ್ಭವಿಸಬಹುದಾದ, ಸಂಬಂಧಪಟ್ಟ ಸ್ವತ್ತು ಅಥವಾ ವಸ್ತುವನ್ನು

> ಪರಿಶೀಲಿಸಬಹುದು ಮತ್ತು ನ್ಯಾಯಾಲಯವು ಯಾವುದೇ ಸ್ವತ್ತು ಅಥವಾ ವಸ್ತುವನ್ನು ಪರಿಶೀಲಿಸುವಲ್ಲಿ, ಕಾರ್ಯ ಸಾಧ್ಯವಾಗಬಹುದಾದಷ್ಟು ಬೇಗನೇ, ಅಂಥ ಪರಿಶೀಲನೆಯಲ್ಲಿ ಗಮನಿಸಲಾದ ಯಾವುವೇ ಸೂಕ್ತ ಸಂಗತಿಗಳ ಜ್ಞಾಪನ ಪತ್ರವನ್ನು ಮಾಡತಕ್ಕದ್ದು ಹಾಗೂ ಅಂಥ ಜ್ಞಾಪನಪತ್ರವು ದಾವೆಯ ದಾಖಲೆಯ ಒಂದು ಭಾಗವಾಗಿ ರೂಪುಗೊಳ್ಳತಕ್ಕದ್ದು".

14. 'ಸಿಪಿಸಿ' ಯ 18ನೇ ನಿಯಮದ XVIIIನೇ ಕ್ರಮಾದೇಶದ ಸರಳ ಓದಿನಿಂದ, ದಾವೆಯ ಯಾವುದೇ ಹಂತದಲ್ಲಿ ಯಾವುದೇ ಪ್ರಶ್ನೆ ಉದ್ಭವಿಸಬಹುದಾದ, ಸಂಬಂಧಪಟ್ಟ ಯಾವುದೇ ಸ್ವತ್ತು ಅಥವಾ ವಸ್ತುವನ್ನು ನ್ಯಾಯಾಲಯವು ಪರಿಶೀಲಿಸಬಹುದು ಮತ್ತು ಅಂಥ ಪರಿಶೀಲನೆಯ ಆಧಾರದ ಮೇಲೆ ಗಮನಿಸಲಾದ ಸೂಕ್ತ ಸಂಗತಿಗಳನ್ನು ದಾಖಲಿಸಬಹುದು. ಹಾಗೂ ಅಂಥ ಜ್ಞಾಪನಪತ್ರವು ದಾವೆಯ ದಾಖಲೆಯ ಭಾಗವಾಗಿರತಕ್ಕದ್ದು. ಸದರಿ ಉಪಬಂಧವು, ಅದು ಸೂಕ್ತವೆಂದು ಭಾವಿಸಿದಲ್ಲಿ, ಪರಿಶೀಲನೆ ಮಾಡುವ ಅಧಿಕಾರವನ್ನು ನ್ಯಾಯಾಲಯದಲ್ಲಿ ನಿಹಿತಗೊಳಿಸಲಾಗಿದೆಯೆಂದು ತೋರಿಸುತ್ತದೆ. ಸದರಿ ಅಧಿಕಾರವನ್ನು ನ್ಯಾಯಾಲಯವು ತಾನಾಗಿಯೇ ಚಲಾಯಿಸಬಹುದು ಅಥವಾ ದಾವೆಯ ಪಕ್ಷಕಾರರು ಮಾಡಿದ ಕೋರಿಕೆಯ ಮೇರೆಗೆ ಸಹ ಚಲಾಯಿಸಬಹುದು. ಪಕ್ಷಕಾರರು ಹಕ್ಕಿನ ವಿಷಯವಾಗಿ ನ್ಯಾಯಾಲಯದಿಂದ ಸ್ಥಳ ಪರಿಶೀಲನೆಯನ್ನು ಕ್ಲೇಮು ಮಾಡಬಹುದೆಂದು ನ್ಯಾಯಾಲಯದ ಭಾಷೆಯು ಸೂಚಿಸುವುದಿಲ್ಲ. 'ಸಿಪಿಸಿ'ಯ 18ನೇ ನಿಯಮದ XVIIIನೇ ಕ್ರಮಾದೇಶದಡಿ ನ್ಯಾಯಾಲಯವು ಅಂಥ ಪರಿಶೀಲನೆ ಅಗತ್ಯವಿಲ್ಲವೆಂದು ಪರಿಗಣಿಸಿದಲ್ಲಿ, ಅಂಥ ಪರಿಶೀಲನೆಗಾಗಿ ಎರಡೂ ಪಕ್ಷಕಾರರು ಕೋರಿದ್ದರೂ ಸಹ, ಸ್ಥಳೀಯ ಪರಿಶೀಲನೆ ಮಾಡಲು ನ್ಯಾಯಾಲಯವು ಬದ್ಧವಾಗಿರುವುದಿಲ್ಲ. ಇನ್ನೊಂದು ಕಡೆಯಲ್ಲಿ, ನ್ಯಾಯದ ಹಿತಾಸಕ್ತಿಯಲ್ಲಿ ಪರಿಶೀಲನೆ ಮಾಡುವುದು ಅಗತ್ಯವೆಂದು ನ್ಯಾಯಾಲಯವು ಭಾವಿಸಿದಲ್ಲಿ, ಎರಡೂ ಕಡೆಯ ಪಕ್ಷಕಾರರು ಹಾಗೆ ಮಾಡಲು ಕೋರಿರದಿದ್ದರೂ ಸಹ ನ್ಯಾಯಾಲಯವು ಪರಿಶೀಲನೆಯನ್ನು ಮಾಡಬಹುದು. ಪ್ರಕರಣದಲ್ಲಿ ಒದಗಿಸಲಾದ ಸಾಕ್ಷ್ಯದ ನಿಖರತೆ ಅಥವಾ ಸರಿತನವನ್ನು ಪರೀಕ್ಷಿಸುವ ಅಥವಾ ವಿರೋಧಾತ್ಮಕ ಶೈಲಿಯಲ್ಲಿ ಸಂಗತಿಗಳ

ಸ್ಥಿತಿಗತಿ ಕುರಿತು ಎರಡು ಗುಂಪಿನವರು ಮಾತನಾಡಿದಾಗ ಇತರರ ವಿರುದ್ಧವಾಗಿ ಕೆಲ ಸಾಕ್ಷಿದಾರರನ್ನು ನಂಬುವ ಸಲುವಾಗಿ ಉಪಬಂಧವನ್ನು ಅಧಿನಿಯಮಿತಿಗೊಳಿಸಿಲ್ಲ.

15. 'ಸಿಪಿಸಿ' ಯ 18ನೇ ನಿಯಮದ XVIIIನೇ ಕ್ರಮಾದೇಶದಲ್ಲಿ "ದಾವೆಯ ಯಾವುದೇ ಹಂತದಲ್ಲಿ" ಎಂಬ ಪದಗಳ ಬಳಕೆಯು, ಸ್ಥಳೀಯ ಪರಿಶೀಲನೆಯನ್ನು ಯಾವುದೇ ಹಂತದಲ್ಲಿ, ಅಂದರೆ, ಸಾಕ್ಷ್ಯವನ್ನು ದಾಖಲಿಸುವ ಮೊದಲು ಅಥವಾ ಸಾಕ್ಷ್ಯವು ನಿರ್ಣಾಯಕವಾದ ನಂತರ ಮತ್ತು ವಾದಗಳನ್ನು ಆಲಿಸುವ ಮೊದಲು ಅಥವಾ ತೀರ್ಪನ್ನು ನೀಡಿದ ನಂತರ ಮಾಡಬಹುದು. ಅಂಥ ಪರಿಶೀಲನೆಗಳನ್ನು ಮಾಡುವುದರಲ್ಲಿ ಯಾವುದಾದರೂ ಉದ್ದೇಶವಿರಬೇಕೆಂಬುದು ಸ್ಪಷ್ಟವಾಗಿದೆ. ಆದರೆ, ಯಾವುದೇ ಕಲ್ಪನೆಯ ವ್ಯಾಪ್ತಿಯಲ್ಲಿ, ಸಾಕ್ಷಿದಾರರ ಹೇಳಿಕೆಯು ಇತರರಿಗೆ ವಿರುದ್ಧವಾಗಿದೆಯೆಂದು ವಿವೇಚಿಸಲು ಅಥವಾ ನಂಬಲು ಉಪಬಂಧಗಳು ಅಧಿನಿಯಮಿತವಾಗಿವೆಯೆಂದು ಹೇಳಲಾಗುವುದಿಲ್ಲ.

16. ಸದ್ಯದ ಪ್ರಕರಣದಲ್ಲಿ ವಾದಿಯ ದಾವೆಯು, ಅವನು ಸದರಿ ಸ್ವತ್ತುಗಳ ಮೇಲೆ ತನ್ನ ಸ್ವಾಮ್ಯದ ಘೋಷಣೆಗಾಗಿ ಮತ್ತು ಪ್ರತಿವಾದಿಯಿಂದ ಹಕ್ಕುದಾರನಿಲ್ಲದ ಸ್ವಾಧೀನವನ್ನು ಕೋರಿ ಆಜ್ಞಾಪಕ ನಿರ್ಬಂಧಕಾಜ್ಞೆಯ ಘೋಷಣೆಗಾಗಿ ಸಲ್ಲಿಸಿರುವುದಾಗಿದೆ. ಅಪೀಲು ನ್ಯಾಯಾಲಯವು ಸರಿಯಾಗಿ ಅಭಿಪ್ರಾಯಪಟ್ಟಿರುವಂತೆ, ನ್ಯಾಯಾಲಯ ಕಮೀಷನರ್‌ರ ನೇಮಕಕ್ಕಾಗಿ ಕೋರಿ ಸದ್ಯದ ಅಪೀಲುದಾರನು ಅಧಿವಿಚಾರಣಾ ನ್ಯಾಯಾಲಯದ ಸಮಕ್ಷಮದಲ್ಲಿ ಅರ್ಜಿಯನ್ನು ಮಂಡಿಸಿದ್ದು, ಅದನ್ನು ತಿರಸ್ಕರಿಸಲಾಗಿದೆ ಮತ್ತು ಅದನ್ನು ಉಚ್ಚ ನ್ಯಾಯಾಲಯವು ದೃಢಪಡಿಸಿರುತ್ತದೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ಸಮಕ್ಷಮದಲ್ಲಿ ಪಕ್ಷಕಾರರ ಸ್ಪಷ್ಟ ಸಾಕ್ಷ್ಯವಿದ್ದು, ಅದರಲ್ಲಿ ಈ ಮೊಕದ್ದಮೆಯಲ್ಲಿ ಒಳಗೊಂಡಿರುವ ವಿವಾದ/ವಿವಾದಾಂಶವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅಪೀಲು ನ್ಯಾಯಾಲಯಕ್ಕೆ ಅಂಥ ಯಾವುದೇ ಸಂದಿಗ್ಧತೆ ಅಥವಾ ತೊಂದರೆ ಕಂಡುಬಂದಿಲ್ಲ. ಅಷ್ಟೇ ಅಲ್ಲದೆ, ಪಿಡಬ್ಲ್ಯೂ.1 ಗೆ ಅವನ ಸಾಕ್ಷ್ಯದಲ್ಲಿ ಕೆಲವು ಸೇರ್ಪಡೆಗಳು ಸಹ ಇದ್ದು, ಅದು ಖಂಡಿತವಾಗಿ ಅನುಸೂಚಿತ

ಸ್ವತ್ತುಗಳಿಗೆ ಅಪೀಲು ನ್ಯಾಯಾಲಯದಿಂದ ಖುದ್ದು ಅಥವಾ ಸ್ಥಳೀಯ ಪರಿಶೀಲನೆ ಅಗತ್ಯವಿದೆಯೆಂದು ಹೇಳುವುದಿಲ್ಲ.

17. ಮೇಲೆ ಹೇಳಲಾದ ಕಾರಣಗಳ ದೃಷ್ಟಿಯಿಂದ, ಈ ನ್ಯಾಯಾಲಯವು ಅಪೀಲು ನ್ಯಾಯಾಲಯದಿಂದ ಹೊರಡಿಸಲಾದ ಪ್ರಶ್ನಿತ ಆದೇಶವು ಕಾನೂನಿಗೆ ಅನುಸಾರವಾಗಿದೆಯೆಂಬ ಪರಿಗಣಿತ ಅಭಿಪ್ರಾಯವನ್ನು ಹೊಂದಿದೆ. ಅರ್ಜಿದಾರನು ಅದರಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಕಾರಣವನ್ನು ನಿರೂಪಿಸಿಲ್ಲ. ತದನುಸಾರವಾಗಿ, ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.